# ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

## ರಾಜ್ಯ ಸಮಿತಿ

**ಪತ್ರಿಕಾ ಹೇಳಿಕೆ:** **21 ಫೆಬ್ರವರಿ 2018**

**ಅಗಲಿದ ರೈತ ನಾಯಕ ಶ್ರೀ.ಕೆ.ಎಸ್.ಪುಟ್ಟಣ್ಣಯ್ಯನವರಿಗೆ ಹಸಿರು ನಮನಗಳು**

ಈ ನಾಡು ಕಂಡ ಅಪ್ರತಿಮ ಹೋರಾಟಗಾರ, ಮಾನವತಾವಾದಿ, ಕೆಚ್ಚೆದೆಯ ರೈತ ನಾಯಕ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವರಿಷ್ಠ, ಮೇಲುಕೋಟೆ ಕ್ಷೇತ್ರದ ಶಾಸಕ, ಶ್ರೀ.ಕೆ.ಎಸ್.ಪುಟ್ಟಣ್ಣಯ್ಯನವರ ಅಂತ್ಯ ಸಂಸ್ಕಾರವು ದಿನಾಂಕ 22 ಫೆಬ್ರವರಿ, 2018 ಗುರುವಾರದಂದು ಅವರ ಸ್ವಗ್ರಾಮವಾದ ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆಯಲ್ಲಿ ಬೆಳಿಗ್ಗೆ 10:30 ಕ್ಕೆ ನಡೆಯಲಿದೆ. ಅಂತ್ಯ ಸಂಸ್ಕಾರವನ್ನು ಯಾವುದೇ ಧಾರ್ಮಿಕ ವಿಧಿವಿಧಾನಗಳಿಲ್ಲದೇ, ಹೋರಾಟದ ಗೀತೆಗಳೊಂದಿಗೆ ನಡೆಸಲಾಗುವುದು. ಮಣ್ಣಿನ ಮಗನ ಅಂತ್ಯ ಸಂಸ್ಕಾರಕ್ಕೆ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಬೊಗಸೆ ಮಣ್ಣನ್ನು ಹಿಡಿದು ರೈತರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಸ್ವರಾಜ್ ಇಂಡಿಯಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ.ಯೋಗೇಂದ್ರ ಯಾದವ್‌ರವರು ಮತ್ತು ಉತ್ತರ ಭಾರತದ ರೈತ ನಾಯಕರಾದ ಶ್ರೀ.ರಾಕೇಶ್ ಟಿಕಾಯಿತ್‌ವರು ಉಪಸ್ಥಿತರಿರಲಿದ್ದಾರೆ.

ಮೆರವಣಿಗೆ ಮತ್ತು ಸಾರ್ವಜನಿಕ ದರ್ಶನ:- ಬೆಳಿಗ್ಗೆ 6 ಗಂಟೆಗೆ ಜೆ.ಎಸ್.ಎಸ್ ಡೆಂಟಲ್ ಕಾಲೇಜಿನಿಂದ ಮೆರವಣಿಗೆ ಹೊರಟು ಶ್ರೀರಂಗಪಟ್ಟಣ, ಪಾಂಡವಪುರ ಟೌನ್ (ಎಲೆಕೆರೆ ಮೂಲಕ) ಹಾದು ಕ್ಯಾತನನಹಳ್ಳಿಗೆ ಬರಲಿದೆ. ಅಂತ್ಯ ಸಂಸ್ಕಾರಕ್ಕೂ ಮುನ್ನ ಬೆಳಿಗ್ಗೆ 7:30 ರಿಂದ 10:30 ರ ವರೆಗೆ ಕ್ಯಾತನಹಳ್ಳಿಯಲ್ಲಿರುವ ಶಾಲಾ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

<u>ಫೆಬ್ರವರಿ 28ರಂದು "ತಿಥಿ ಬಿಡಿ ಸಸಿ ನೆಡಿ" ಕಾರ್ಯಕ್ರಮ ಮತ್ತು ಹಸಿರು ಕಲಾವಿದರಿಂದ ನಾಟಕ ಪ್ರದರ್ಶನ:-</u>

ಹನ್ನೊಂದನೆಯ ದಿನದಂದು ನಡೆಯುವ ತಿಥಿಯ ಬದಲಾಗಿ ಕರ್ನಾಟಕ ರಾಜ್ಯ ರೈತ ಸಂಘದ ವಿಚಾರವಾದಿ ನೆಲೆಗಟ್ಟಿನಲ್ಲಿ ನಡೆದು ಬಂದಿರುವ "ತಿಥಿಬಿಡಿ ಸಸಿನೆಡಿ" ಕಾರ್ಯಕ್ರಮವು ಕ್ಯಾತನಹಳ್ಳಿಯಲ್ಲಿ ನಡೆಯಲಿದೆ. ಅದೇ ದಿನ ಸಂಜೆ ರಂಗ ಕಲಾವಿದರೂ ಅಗಿದ್ದ ಅಗಲಿದ ರೈತ ನಾಯಕನಿಗೆ ಪಾಂಡವಪುರದ "ಹಸಿರು ಕಲಾವಿದರು" ನಾಟಕ ಪ್ರದರ್ಶನದ ಮೂಲಕ ಶ್ರದ್ಧಾಂಜಲಿ ಅರ್ಪಿಸಲಿದ್ದಾರೆ.

ರಾಜ್ಯ ಸಮಿತಿ,

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

# Karnataka Rajya Raitha Sangha and Green Brigade

## State Committee

Press Release 21st February 2018

**A Green Goodbye to Shri K S Puttannaiah, the Recently Departed Farmers' Leader.**

A proud farmer, a humanitarian and a peerless activist that this nation has seen; the guiding light of Karnataka Rajya Raitha Sangha and Green Brigade(KRRS), the MLA from Melukote constituency Shri KS Puttannaiah's funeral will take place on Thursday 22nd February 2018 in his native village Kyathanahalli, Pandavapura Taluk, Mandya district at 10.30 am.

His funeral rites will be conducted not with following any religious rituals but through the songs of struggle. To honor our very own son of the soil, thousands of farmers from all over Karnataka will gather here with each bringing a sacksful of their own soil. Swaraj India President Shri Yogendra Yadav and Shri Rakesh Tikait, a farmers' leader from North India will be present.

Funeral Procession and Public viewing: The funeral procession will start at JSS Dental College, Mysuru at 6 am and will travel through Srirangapatna, Pandavapura Town (via Elekere) and arrive at Kyathanahalli village. Public viewing has been arranged between 7.30 am till 10.30 am before the funeral at the school grounds in Kyathanahalli.

February 28: 'Reject Tithi(A Hindu religious ceremony), Plant a Sapling Instead' Program and a Play by "Green Artists"

Following on from a rationalist ideology that forms the base of Karnataka Rajya Raitha Sangha and Green Brigade(KRRS), the eleventh day Hindu religious ceremony will be replaced by ''Rejecting the religious ceremony, Plant a Sapling Instead" Program will take place on the 11th day. That same evening there will be a play by the "Green Artists" from Pandavapura in memory of Shri KS Puttannaiah who himself had been a stage actor in his younger days.

State Committee

Karnataka Rajya Raitha Sangha and Green Brigade

*******************************************************************************